# ನಾನೇಕೆ ಈ ಕಾದಂಬರಿ ಬರೆದೆ?

ಎಲ್ಲಾ ಪುರುಷ ಸಾಧಕರ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬುದು ರೂಢಿಗತ ಮಾತು. ನಮ್ಮ ಸಾಮಾಜಿಕ ಆರ್ಥಿಕ ವ್ಯವಸ್ಥೆಯ ಸೂತ್ರವು ಪುರುಷರ ಕೈಗಳಲ್ಲಿರುವ ಇತಿಹಾಸದ ಫಲವಾಗಿ ಪುರುಷರು ಮುಂದೆ, ಮಹಿಳೆಯರು ಹಿಂದೆ ಎಂಬ ಮಾತು ಮೂಡಿಬಂದಿದೆ. ಇದೇ ಇತಿಹಾಸದ ಕೆಲವು ಹಂತಗಳು ಮಹಿಳೆಯರು ಪುರುಷರಿಗೆ ಹೆಗಲೆಣೆಯಾಗಿ ನಿಂತ ಸಾಧನೆಯನ್ನು ಸಾರುತ್ತವೆ. ನಾನು ಮೊದಲಿನಿಂದಲೂ 'ಪುರುಷರ ಸಾಧನೆಯ ಹಿಂದೆ ಮಹಿಳೆ ಇರುತ್ತಾಳೆ' ಎನ್ನುವ ಬದಲು 'ಜೊತೆಯಾಗಿ ಇರುತ್ತಾಳೆ' ಎಂಬ ಸಮಾನ ದೃಷ್ಟಿಯನ್ನು ಹೊಂದಿದ್ದೇನೆ, ಪ್ರತಿಪಾದಿಸುತ್ತಾ ಬಂದಿದ್ದೇನೆ. ಈ ನನ್ನ ಪ್ರತಿಪಾದನೆಯ ಪ್ರತೀಕವೆಂಬಂತೆ ಅನೇಕ ಮಹಿಳೆಯರ ಬದುಕು ನನ್ನ ಭಾವಕೋಶದ ಭಾಗವಾಗಿ ಬೆಳೆದಿದೆ. ಇಂಥವರ ಸಾಲಿನ ಪ್ರಮುಖರಲ್ಲೊಬ್ಬರಾಗಿ ಕಸ್ತೂರ್ ಬಾ ಅವರು ನನ್ನೊಳಗನ್ನು ಕಲಕಿದ್ದಾರೆ. ಅರ್ಥಮಾಡಿಕೊಳ್ಳುವ ಅಧ್ಯಯನಕ್ಕೆ ಒತ್ತಾಸೆಯಾಗಿದ್ದಾರೆ. ಹೀಗಾಗಿ ನಾನು

ಅನೇಕ ವರ್ಷಗಳ ಹಿಂದೆಯೇ ಓದಿದ್ದ ಗಾಂಧಿಯವರ ಆತ್ಮಕಥೆಯ ಜೊತೆಗೆ ಎರಡು ಮೂರು ವರ್ಷಗಳಿಂದ ಸಮಯಾನುಸಾರ ಇನ್ನೂ ಕೆಲವರ ಕೃತಿಗಳು ಹಾಗೂ ಲೇಖನಗಳನ್ನು ಓದುತ್ತಾ ಬಂದೆ. ಕನ್ನಡದಲ್ಲಿ ಬಂದ ವೆಂಕೋಬರಾವ್ ಅವರ 'ಗಾಂಧಿ ಚರಿತ ಮಾನಸ', ಎಚ್.ಎಸ್. ಅನುಪಮಾ ಅವರ 'ನಾನು ಕಸ್ತೂರ್' ಕೃತಿಗಳನ್ನು ಒಳಗೊಂಡಂತೆ ನನ್ನ ನೆನಪಲ್ಲಿ ಇನ್ನು ಕೆಲವು ಕನ್ನಡ ಕೃತಿಗಳಿದ್ದವು. ಜೊತೆಗೆ ಆಂಗ್ಲಭಾಷೆಯಲ್ಲಿ ಇದ್ದ ಉಷಾ ಬಹೆನ್, ಅರುಣ್ ಗಾಂಧಿ, ತುಷಾರ್ ಗಾಂಧಿ, ಸಿಮ್ರಿನ್ ಸಿರೂರ್, ಲೋರ್ಗಾ ಮಂಗೂರ್, ಅಪರ್ಣಾ ಬಸು, ಬಿಬು ಪ್ರಸಾದ್ ರೋಟ್ರೆ, ತನ್ವಿದುಬೆ, ಬಿ.ಎಂ. ಬಲ್ಲಾ, ಸೈಫ್ ಹೈದರ್ ಹಸನ್, ವಿನಯಲಾಲ್, ಮುಂತಾದವರ ಪುಸ್ತಕ ಹಾಗೂ ಲೇಖನಗಳನ್ನು ಅಭ್ಯಾಸ ಮಾಡಿದೆ. ಕೆಲವರ ಬರಹಗಳಲ್ಲಿ ಕಸ್ತೂರ್ ಬಾ ಮತ್ತು ಗಾಂಧಿ ಅವರ ನಡುವೆ ಇದ್ದ ಭಿನ್ನ ನೆಲೆಗಳ ಪ್ರಸ್ತಾಪವೂ ಅಲ್ಲಲ್ಲಿ ಸೂಚ್ಯವಾಗಿ ಬಂದಿರುವುದನ್ನು ಕಂಡೆ. ಈ ಎಲ್ಲ ಓದಿನ ನಂತರ ನನಗೆ ಕಸ್ತೂರಿಬಾ ಮತ್ತು ಗಾಂಧಿಯವರ ಭಾವ–ಬುದ್ಧಿ ಕೋಶದ ಭಿನ್ನ ನೆಲೆಗಳನ್ನು ಕೇಂದ್ರವಾಗಿಟ್ಟುಕೊಂಡು ಕೃತಿಯೊಂದನ್ನು ಬರೆಯಲು ಇನ್ನೂ 'ಅವಕಾಶ' ಇದೆ ಅನ್ನಿಸಿತು. ಈ ಅನಿಸಿಕೆಯು ತೀವ್ರವಾಗಿ ಕಾಡಿದ ಫಲವೇ ಈ 'ಕಸ್ತೂರ್ ಬಾ vs ಗಾಂಧಿ' ಕಾದಂಬರಿ.

ಒಂದು ವಿಷಯವನ್ನು ಇಲ್ಲಿ ಸ್ಪಷ್ಟಪಡಿಸಬೇಕು. ಕಸ್ತೂರ್ ಬಾ ಮತ್ತು ಗಾಂಧಿ ನಡುವೆ ಇದ್ದದ್ದು ವಿಚಾರ ವೈರುಧ್ಯವೇ ಹೊರತು ವ್ಯಕ್ತಿ ವಿರೋಧವಲ್ಲ. ಇವರಿಬ್ಬರಲ್ಲಿ ಕಂಡುಬಂದ ಕೆಲವು ಭಿನ್ನ ನೆಲೆಗಳಿಂದಾಗಿ ವಿರೋಧಿ ಪಟ್ಟವನ್ನು ಕಟ್ಟಲಾಗದು, ಕಟ್ಟಬಾರದು. ವೈರುಧ್ಯ ಮತ್ತು ವಿರೋಧಗಳು ಒಂದೇ ಸ್ವರೂಪದಲ್ಲಿ ಇರುವುದಿಲ್ಲ. ಭಿನ್ನ ನೆಲೆ ಮತ್ತು ವೈರುಧ್ಯಗಳು ಸಾಧಕರ ವೈಯುಕ್ತಿಕ ಮತ್ತು ಸಾರ್ವಜನಿಕ ಬದುಕಿನಲ್ಲಿ ಬಂದು ಬೆರೆತು ಕಡೆಗೆ ಹೊರತಾಗಿ ಹೋಗುವುದು ಒಂದು ವಿಶಿಷ್ಟ ಹಾದಿಯೂ ಹೌದು. ಈ ಹಾದಿಯಲ್ಲಿ ಜೊತೆಯಾಗಿ ಸಾಗಿದವರು ಕಸ್ತೂರ್ ಬಾ ಮತ್ತು ಗಾಂಧಿ. ಮುಖಾಮುಖಿ, ಅನುಸಂಧಾನ, ಅನುಬಂಧ – ಇವು ಇವರಿಬ್ಬರ ವ್ಯಕ್ತಿತ್ವದ ಅಸಾಧಾರಣ ಪ್ರಕ್ರಿಯಾ ರೂಪಗಳು. ಇಬ್ಬರದೂ ಚಲನಶೀಲ ಚಿಂತನೆಯ ವ್ಯಕ್ತಿತ್ವ. ಅನುಭವ ಮತ್ತು ಅರಿವುಗಳ ಅನುಸಂಧಾನದಲ್ಲಿ ತಪ್ಪು ತಿಳುವಳಿಕೆಗಳನ್ನು ತಿದ್ದಿಕೊಳ್ಳುತ್ತಾ ಮುಖಾಮುಖಿಯನ್ನು ಅನುಬಂಧದ ನೆಲೆಗೆ ಕೊಂಡೊಯ್ದ ಅಪರೂಪದ ಆತ್ಮ ನಿರೀಕ್ಷೆಯ ವ್ಯಕ್ತಿತ್ವಗಳೆಂದರೆ ಕಸ್ತೂರ್ ಬಾ ಮತ್ತು ಗಾಂಧಿ. ಈ ಪ್ರಕ್ರಿಯಾ ಪ್ರತೀಕವೇ ನನ್ನ ಕಾದಂಬರಿಯ ಕೇಂದ್ರ ಪ್ರಜ್ಞೆ.

ಈ ಕಾದಂಬರಿ ರಚನೆಗೆ ಮುಂಚೆ ನನ್ನ ಓದಿಗೆ ಒದಗಿದ ಕೃತಿಗಳ ಕರ್ತೃಗಳನ್ನು ನೆನೆಯುತ್ತ ಸಹೃದಯ ಓದುಗರ ಮನದ ಮಡಿಲಿಗೆ ಸಲ್ಲಿಸುತ್ತೇನೆ.

■ **ಬರಗೂರು ರಾಮಚಂದ್ರಪ್ಪ**



## ಬರಗೂರು ರಾಮಚಂದ್ರಪ್ಪ

*ಬೋಧಕರಾಗಿ, ಲೇಖಕರಾಗಿ, ಸಿನಿಮಾ ನಿರ್ದೇಶಕರಾಗಿ ಹಾಗೂ ಆಡಳಿತಗಾರನಾಗಿ ಕನ್ನಡ ನಾಡು–ನುಡಿಯನ್ನು ಕಟ್ಟುವ ಕೆಲಸದಲ್ಲಿ ನಿರಂತರವಾಗಿ ತೊಡಗಿಕೊಂಡಿರುವ ಹೆಗ್ಗಳಿಕೆ ಬರಗೂರು ರಾಮಚಂದ್ರಪ್ಪನವರದು. ಸಾಹಿತ್ಯ ಹಾಗೂ ಸಿನಿಮಾ ಮಾಧ್ಯಮಗಳನ್ನು ತಮ್ಮ ಜನಪರ ಚಿಂತನೆಗಳ ಅಭಿವ್ಯಕ್ತಿಯ ರೂಪದಲ್ಲಿ ಬಳಸಿಕೊಳ್ಳುತ್ತಿರುವ ಅವರು, ನಾಡಿನಾದ್ಯಂತ ಜನಪರ ಮನಸ್ಸುಗಳನ್ನು ರೂಪಿಸುವ ಕೆಲಸದಲ್ಲೂ ನಿರತರು. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ನೃಪತುಂಗ ಸಾಹಿತ್ಯ ಪ್ರಶಸ್ತಿಗಳೊಂದಿಗೆ ಹಲವಾರು ಪ್ರಶಸ್ತಿ–ಪುರಸ್ಕಾರಗಳು ಅವರ ಸಾಂಸ್ಕೃತಿಕ ಸಾಧನೆಗೆ ಸಂದಿವೆ. ಬರಗೂರರ ಬಹುತೇಕ ಸಿನಿಮಾಗಳಿಗೆ ರಾಜ್ಯ–ರಾಷ್ಟ್ರ ಪ್ರಶಸ್ತಿಗಳು ಸಂದಿವೆ. ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಅಭಿವೃದ್ಧಿ ಅಧಿಕಾರದ ಅಧ್ಯಕ್ಷರಾಗಿ ಅವರು ಮಾಡಿರುವ ಕೆಲಸಗಳು ಆಯಾ ಸಂಸ್ಥೆಗಳ ಗೌರವವನ್ನು ಹೆಚ್ಚಿಸಿವೆ. ಕಥೆ, ಕಾದಂಬರಿ, ಕಾವ್ಯ, ವಿಮರ್ಶೆ ಸೇರಿದಂತೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಗಾಂಧೀಜಿಯ ಬದುಕು–ವ್ಯಕ್ತಿತ್ವದ ಪ್ರೇರಣೆಯನ್ನು ಅವರ ಸಾಹಿತ್ಯ–ಸಿನಿಮಾ ಎರಡರಲ್ಲೂ ಕಾಣಬಹುದು. ಈ ಗಾಂಧಿಪ್ರೇಮದ ಹೊಸ ಅಭಿವ್ಯಕ್ತಿ – 'ಕಸ್ತೂರ್‌ಬಾ Vs ಗಾಂಧಿ' ಕಾದಂಬರಿ. ಮೋಹನದಾಸ ಕರಮಚಂದ ಗಾಂಧಿ ಮಹಾತ್ಮನಾಗಿ ರೂಪಾಂತರಗೊಳ್ಳುವ ನಿಟ್ಟಿನಲ್ಲಿ ಕಸ್ತೂರರ ಪಾತ್ರವನ್ನು ಚಿತ್ರಿಸುವ ಈ ಕೃತಿ, ಬರಗೂರರು ಗೌರವಿಸುವ 'ಸಂವಾದ ಸಂಸ್ಕೃತಿ'ಯ ತಂತ್ರವನ್ನು ಒಳಗೊಂಡಿರುವುದು ಕುತೂಹಲಕರ. 'ಗಾಂಧಿ 150'ರ ಸ್ಮರಣೆಯ ಸಂದರ್ಭದಲ್ಲಿ ಕಸ್ತೂರ್‌ಬಾ ಅವರ ಮೂಲಕ ಮಹಾತ್ಮನನ್ನು ನೆನಪಿಸುವ ಈ ಕಥನ ಹೊಸ ತಲೆಮಾರಿಗೆ 'ಗಾಂಧಿ'ಯನ್ನು ಪರಿಚಯಿಸುವ ನಿಟ್ಟಿನಲ್ಲಿ ಮುಖ್ಯವಾದುದು.*

ಮಾಡ್ತಿದ್ದೀಯ. ಅದಕ್ಕೇ ನನ್ನ ಆತ್ಮಕತೇಲಿ ನೀನಿಲ್ಲದೆ ನಾನು ಅರ್ಧ ಆಗಿರ್‍ತಿದ್ದೆ ಅನ್ನೋ ಅರ್ಥ ಬರೋ ಮಾತ್ ಬರ್‍ದಿದ್ದೀನಿ. 1927ರಲ್ಲೇ ಈ ಮಾತು ದಾಖಲಾಯ್ತು ಗೊತ್ತ?'

'ಗೊತ್ತಿಲ್ದೆ ಏನು? ನೀವು ದಾಖಲು ಮಾಡ್ತೀರಿ, ಬಯಲೂ ಮಾಡ್ತೀರಿ, ಅದಕ್ಕೆ ನಿಮ್ ಜೀವನಾನ ತೆರೆದ ಪುಸ್ತಕ ಅಂತೀರಿ. ಆದ್ರೆ ನಾವ್ ಹೆಂಗಸರು – ನಿಮ್ ಹಾಗೆ ತೆರೆದ ಪುಸ್ತಕ ಆಗೋಕ್ ಆಗಲ್ಲ' ಎಂದು ನೇರಾನೇರ ನುಡಿದ ಕಸ್ತೂರ್‌ಬಾ ಅವರಿಗೆ ಗಾಂಧಿ, 'ನಮ್ ಸಮಾಜಾನೇ ಹಾಗಿದ್ಯಲ್ವ' ಎಂದು ಸಮಾಧಾನಿಸಲು ಪ್ರಯತ್ನಿಸಿದರು. ಆದರೆ ಕಸ್ತೂರ್‌ಬಾ ಅಲ್ಲಿಗೇ ಸುಮ್ಮನಾಗಲಿಲ್ಲ.

'ನೀವೂ ಒಂದೊಂದ್ಸಾರಿ ಹಾಗೇ ಇರ್‍ತೀರಿ. ಸ್ತ್ರೀಯರನ್ನ ದೇವತೆಗಳಿಗೆ ಹೋಲಿಸಿ ಸ್ವಾತಂತ್ರ್ಯ ಕಸ್ಕೋತೀರಿ' ಎಂದು ಆರೋಪಿಸಿಯೇ ಬಿಟ್ಟರು.

ಗಾಂಧಿಗೆ ತಡೆಯಲಾಗಲಿಲ್ಲ. ಸಮಾಧಾನದಿಂದ ಮಾತಾಡಿದರೂ ಈಕೆ ತನ್ನ ಪಟ್ಟು ಬಿಡುತ್ತಿಲ್ಲ ಎಂದು ಸಿಟ್ಟು ಬಂತು, 'ಏನ್ ಮಾತು ಅಂತ ಆಡ್ತೀಯ ನೀನು? ನಾನು ಸ್ವಾತಂತ್ರ್ಯ ಹೋರಾಟಕ್ಕಾಗಿ ಜೀವನ ಮುಡುಪಿಟ್ಟೋನು' ಎಂದರು ಗದರುದನಿಯಲ್ಲಿ. ಕಸ್ತೂರ್‌ಬಾ ಥಟ್ಟನೆ ಹೇಳಿದರು:

'ಸಂಸಾರದಲ್ಲಿ ಸ್ವಾತಂತ್ರ್ಯ, ಸಮಾಜದಲ್ಲಿ ಸ್ವಾತಂತ್ರ್ಯ – ಎರಡಕ್ಕೂ ಹೆಣಗಾಡಿದ ಜೀವ ನಂದು. ಸಮಾಜ–ದೇಶ ಅಂತ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ ಜೀವನ ನಿಮ್ದು.'

ಗಾಂಧಿಯೂ ತಿರುಗೇಟು ನೀಡಿದರು. ಗದರದೆಯೇ ನೆದರು ತುಂಬಿದ ನಾಲಗೆಯಾದರು;

'ನಾನು ಎಲ್ಲಾ ಗಂಡಸ್ರಂತಲ್ಲ. ನಿನಗ್ ನಾನು ಸ್ವಾತಂತ್ರ್ಯ ಕೊಟ್ಟಿಲ್ವ? ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡಿಲ್ವ?'